**Circular No – 002 / 2025**

Date: 03-01-2025

To
All Members of The Association

**KARNATAKA STATE WORKERS WELFARE AND SOCIAL SECURITY (ASHADEEPA YOJANE) SOCIETY**

The Government of Karnataka has framed a scheme called "Ashadeepa Scheme" and the said scheme being implemented through Karnataka State Workers Welfare and Social Security (Ashadeepa Scheme) Society (R). This is to encourage employment opportunities in the private sector factories and establishments, to the candidates belonging to Schedule Caste and Schedule Tribes.

The various benefits as per the scheme are payable as reimbursement of the ESI and EPF contributions, the stipend paid to the apprenticeship trainees , the salary after completion of apprenticeship training as well salary paid to the newly recruited candidates given in the attachment.

A copy of the Government Order and Ashadeepa Scheme Brochures are enclosed.

**For KARNATAKA EMPLOYERS' ASSOCIATION**

**Sd/**
**[B C Prabhakar]**
**President**

## ಕರ್ನಾಟಕ ಸರ್ಕಾರ

ವಿಷಯ:- ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ (ಆಶಾದೀಪ ಯೋಜನೆ) ಸೊಸೈಟಿಯು ಜಾರಿಗೊಳಿಸುತ್ತಿರುವ ಆಶಾದೀಪ ಯೋಜನೆಯಡಿ ನೀಡುತ್ತಿರುವ ಸೌಲಭ್ಯಗಳನ್ನು ಪರಿಷ್ಕರಿಸುವ ಕುರಿತು.

ಉಲ್ಲೇಖ:-
1. ಸರ್ಕಾರದ ಆದೇಶ ಸಂಖ್ಯೆ :ಕಾಇ 327 ಎಲ್.ಇ.ಟಿ 2016, ದಿನಾಂಕ:03-07-2017.
2. ಸರ್ಕಾರದ ಆದೇಶ ಸಂಖ್ಯೆ :ಕಾಇ 327 ಎಲ್.ಇ.ಟಿ 2016, ದಿನಾಂಕ:08-02-2018.
3. ಸರ್ಕಾರದ ಆದೇಶ ಸಂಖ್ಯೆ :ಕಾಇ 327 ಎಲ್.ಇ.ಟಿ 2016, ದಿನಾಂಕ:22-07 2019.
4. ಸರ್ಕಾರದ ಆದೇಶ ಸಂಖ್ಯೆ :ಕಾಇ 327 ಎಲ್.ಇ.ಟಿ 2016 (ಭಾಗ-08), ದಿನಾಂಕ: 01-01-2020.
5. ಜಂಟಿ ಕಾರ್ಮಿಕ ಆಯುಕ್ತರು ಮತ್ತು ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ (ಆಶಾದೀಪ ಯೋಜನೆ) ಸೊಸೈಟಿ ಇವರ ಪತ್ರ ಸಂಖ್ಯೆ: ಆಯೋಸೊ/ಪ್ರಸ್ತಾವನೆ/ಸಿ.ಆರ್-01/2024-25, ದಿನಾಂಕ:05-04-2024.

****

**ಪ್ರಸ್ತಾವನೆ:**

ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಖಾಸಗಿ ವಲಯದ ಕಾರ್ಖಾನೆಗಳು ಹಾಗೂ ಉದ್ದಿಮೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದವರಿಗೆ ಉದ್ಯೋಗ ದೊರಕಿಸಿಕೊಡಲು 2017-18ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವ ಆಶಾದೀಪ ಯೋಜನೆಯ ಅನುಷ್ಠಾನಕ್ಕೆ ರಾಜ್ಯ ಸರ್ಕಾರವು ರೂ.5.00 ಕೋಟಿ ಆಯವ್ಯಯವನ್ನು ನಿಗದಿಪಡಿಸಿರುತ್ತದೆ. ಖಾಸಗಿ ಸಂಸ್ಥೆಗಳಲ್ಲಿ ಹೊಸದಾಗಿ ನೇಮಕಗೊಳ್ಳುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಸಂಸ್ಥೆಯ ಆಡಳಿತ ವರ್ಗ ಪಾವತಿಸಬೇಕಾಗಿರುವ ಇ.ಎಸ್.ಐ ಮತ್ತು ಭವಿಷ್ಯ ನಿಧಿ ವಂತಿಗೆಯನ್ನು ಸರ್ಕಾರದಿಂದ ಭರಿಸುವ ಮೂಲಕ "ಆಶಾದೀಪ " ಯೋಜನೆಯನ್ನು ಜಾರಿಗೊಳಿಸಲು ಅನುಮೋದನೆ ನೀಡಲಾಗಿದೆ.

ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಈ ಯೋಜನೆಯನ್ನು 10,000 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ವಿಸ್ತರಿಸುವ ಉದ್ದೇಶದಿಂದ, ಹೆಚ್ಚುವರಿಯಾಗಿ ರೂ.35.00 ಕೋಟಿಗಳನ್ನು ಭರಿಸಲು ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ.

ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ 2019-20 ನೇ ಸಾಲಿನಲ್ಲಿ ಆಶಾದೀಪ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ಕರ್ನಾಟಕ ಅನುಸೂಚಿತ ಜಾತಿಗಳ ಉಪ ಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆ ( ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ-2013ರ ಪ್ರಕಾರ ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 04-06-2019ರಂದು ನಡೆದ ರಾಜ್ಯ ಅನುಸೂಚಿತ ಜಾತಿಗಳ/ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ ಸಭೆಯ ನಡವಳಿಯಲ್ಲಿ ಅನುಮೋದಿಸಿದಂತೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ತಿದ್ದುಪಡಿ ಸರ್ಕಾರಿ ಆದೇಶವನ್ನು ಹೊರಡಿಸಲಾಗಿರುತ್ತದೆ.

ಕ್ರಮ ಸಂಖ್ಯೆ (5)ರಲ್ಲಿ ಓದಲಾದ ಜಂಟಿ ಕಾರ್ಮಿಕ ಆಯುಕ್ತರು ಮತ್ತು ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ (ಆಶಾದೀಪ ಯೋಜನೆ) ಸೊಸೈಟಿ ಇವರ ಪತ್ರದಲ್ಲಿ, ಆಶಾದೀಪ ಯೋಜನೆಯಡಿಯಲ್ಲಿ ಒದಗಿಸುತ್ತಿರುವ ಸೌಲಭ್ಯಗಳಿಗೆ ಸಂಬಂಧಪಟ್ಟಂತೆ 2024-25ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 207ರಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಘೋಷಿಸಿದಂತೆ, ಸದರಿ ಯೋಜನೆಯಡಿ ಒದಗಿಸಲಾಗುತ್ತಿರುವ ಸೌಲಭ್ಯಗಳನ್ನು ಈ ಕೆಳಕಂಡಂತೆ ಪರಿಷ್ಕರಿಸಿ ಸೂಕ್ತ ಸರ್ಕಾರಿ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

1. **ಅಪ್ರೆಂಟೈಸ್ ತರಬೇತಿ ಅಭ್ಯರ್ಥಿಗಳ ಶಿಷ್ಯವೇತನ ಮರುಪಾವತಿ:-** ಆಶಾದೀಪ ಯೋಜನೆಯಡಿ 6 ತಿಂಗಳಿನಿಂದ 2 ವರ್ಷಗಳ ಅವಧಿಯ ಅಪ್ರೆಂಟೈಸ್ ತರಬೇತಿ ಪಡೆಯುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಅಪ್ರೆಂಟೈಸ್ ಕಾಯ್ದೆ, 1961 ರನ್ವಯ ಮಾಲೀಕರು ಪಾವತಿಸಿದ ಶಿಷ್ಯವೇತನದಲ್ಲಿ 2/3 ರಷ್ಟು ಮೊತ್ತವನ್ನು ಮಾಸಿಕ ತಲಾ ರೂ.5000/-ಗಳ ಮಿತಿಯೊಳಗೆ ಮರುಪಾವತಿಸುವುದು.
2. **ಹೊಸದಾಗಿ ನೇಮಿಸಿಕೊಂಡ ಅಪ್ರೆಂಟೈಸ್ ಅಭ್ಯರ್ಥಿಗಳ ವೇತನ ಭಾಗಶಃ ಮರುಪಾವತಿ:-** ಅಪ್ರೆಂಟೈಸ್ ತರಬೇತಿ ಪೂರ್ಣಗೊಂಡ ನಂತರ ಅದೇ ಮಾಲೀಕರು ಖಾಯಂ ಹುದ್ದೆಗೆ ಅದೇ ಅಭ್ಯರ್ಥಿಯನ್ನು ಹೊಸದಾಗಿ ನೇಮಕಾತಿ ಮಾಡಿಕೊಂಡಲ್ಲಿ, ಮಾಲೀಕರು ಪಾವತಿಸಿದ ವೇತನದಲ್ಲಿ ಶೇ.50, ರಷ್ಟು ಮೊತ್ತವನ್ನು ಮಾಸಿಕ ತಲಾ ರೂ.7000/-ಗಳ ಮಿತಿಯೊಳಗೆ 2 ವರ್ಷಗಳ ಅವಧಿಗೆ ಮರು-ಪಾವತಿಸುವುದು.
3. **ಹೊಸದಾಗಿ ಖಾಯಂ ಹುದ್ದೆಗೆ ನೇಮಕಾತಿ:-** ಹೊಸದಾಗಿ ಖಾಯಂ ಹುದ್ದೆಗೆ ನೇಮಿಸಿಕೊಂಡ ಸದರಿ ವರ್ಗದ ಅಭ್ಯರ್ಥಿಗಳಿಗೆ ಮಾಲೀಕರು ಪಾವತಿಸಿದ ವೇತನದಲ್ಲಿ ಮಾಸಿಕ ತಲಾ ರೂ.6000/-ಗಳ ಮಿತಿಯೊಳಗೆ 2 ವರ್ಷಗಳ ಅವಧಿಗೆ ಮರುಪಾವತಿಸುವುದು.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಾ ಇ 193 ಎಲ್‌ಇಟಿ 2024, ಬೆಂಗಳೂರು, ದಿನಾಂಕ:11/06/2024**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2024-25 ನೇ ಸಾಲಿನ ಆಯವ್ಯಯದ ಕಂಡಿಕೆ ಸಂಖ್ಯೆ 207 ರಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿದಂತೆ ಹಾಗೂ ಪ್ರಸ್ತುತ ಆಶಾದೀಪ ಯೋಜನೆಯಡಿ ಒದಗಿಸಲಾಗುತ್ತಿರುವ ಸೌಲಭ್ಯಗಳನ್ನು ಈ ಕೆಳಕಂಡಂತೆ ಪರಿಷ್ಕರಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

1. **ಮಾಲೀಕರು ಪಾವತಿಸಿದ ಇ.ಎಸ್. ಐ ಮತ್ತು ಇ.ಪಿ.ಎಫ್ ವಂತಿಕೆ ಮರುಪಾವತಿ:-** ಖಾಸಗಿ ವಲಯದ ಸಂಸ್ಥೆಗಳಲ್ಲಿ ಹೊಸದಾಗಿ ನೇಮಿಸಿಕೊಳ್ಳುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯೋಗಿಗಳಿಗೆ ಮಾಲೀಕರು/ಉದ್ಯೋಗದಾತರು ಕಡ್ಡಾಯವಾಗಿ ಪಾವತಿಸಿದ ಶಾಸನಬದ್ಧ ಭವಿಷ್ಯನಿಧಿ ಹಾಗೂ ಇ.ಎಸ್.ಐ. ವಂತಿಕೆಯನ್ನು ರಾಜ್ಯ ಸರ್ಕಾರದಿಂದ ಮಾಲೀಕರು/ಉದ್ಯೋಗದಾತರಿಗೆ ಎರಡು ವರ್ಷಗಳ ಅವಧಿವರೆಗೆ ಮಾಸಿಕ ಗರಿಷ್ಠ ತಲಾ ರೂ.3000/-ಗಳ ಮಿತಿಯೊಳಗೆ ಮರುಪಾವತಿಸುವುದು.
2. **ಅಪ್ರೆಂಟೈಸ್ ತರಬೇತಿ ಅಭ್ಯರ್ಥಿಗಳ ಶಿಷ್ಯವೇತನ ಮರುಪಾವತಿ:-**ಆಶಾದೀಪ ಯೋಜನೆಯಡಿ 6 ತಿಂಗಳಿನಿಂದ 2 ವರ್ಷಗಳ ಅವಧಿಯ ಅಪ್ರೆಂಟೈಸ್ ತರಬೇತಿ ಪಡೆಯುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಅಪ್ರೆಂಟೈಸ್ ಕಾಯ್ದೆ, 1961 ರನ್ವಯ ಮಾಲೀಕರು ಪಾವತಿಸಿದ ಶಿಷ್ಯವೇತನದಲ್ಲಿ 2/3 ರಷ್ಟು ಮೊತ್ತವನ್ನು ಮಾಸಿಕ ತಲಾ ರೂ.5000/-ಗಳ ಮಿತಿಯೊಳಗೆ ಮರುಪಾವತಿಸುವುದು.
3. **ಹೊಸದಾಗಿ ನೇಮಿಸಿಕೊಂಡ ಅಪ್ರೆಂಟೈಸ್ ಅಭ್ಯರ್ಥಿಗಳ ವೇತನ ಭಾಗಶಃ ಮರುಪಾವತಿ:-** ಅಪ್ರೆಂಟೈಸ್ ತರಬೇತಿ ಪೂರ್ಣಗೊಂಡ ನಂತರ ಅದೇ ಮಾಲೀಕರು ಖಾಯಂ ಹುದ್ದೆಗೆ ಅದೇ ಅಭ್ಯರ್ಥಿಯನ್ನು ಹೊಸದಾಗಿ ನೇಮಕಾತಿ ಮಾಡಿಕೊಂಡಲ್ಲಿ, ಮಾಲೀಕರು ಪಾವತಿಸಿದ ವೇತನದಲ್ಲಿ ಶೇ.50 ರಷ್ಟು ಮೊತ್ತವನ್ನು ಮಾಸಿಕ ತಲಾ ರೂ.7000/-ಗಳ ಮಿತಿಯೊಳಗೆ 2 ವರ್ಷಗಳ ಅವಧಿಗೆ ಮರು-ಪಾವತಿಸುವುದು.
4. **ಹೊಸದಾಗಿ ಖಾಯಂ ಹುದ್ದೆಗೆ ನೇಮಕಾತಿ:-** ಹೊಸದಾಗಿ ಖಾಯಂ ಹುದ್ದೆಗೆ ನೇಮಿಸಿಕೊಂಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮಾಲೀಕರು ಪಾವತಿಸಿದ

ವೇತನದಲ್ಲಿ ಮಾಸಿಕ ತಲಾ ರೂ.6000/-ಗಳ ಮಿತಿಯೊಳಗೆ 2 ವರ್ಷಗಳ ಅವಧಿಗೆ ಮರುಪಾವತಿಸುವುದು.

**ಮೇಲ್ಕಂಡ ಸೌಲಭ್ಯಗಳನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಜಾರಿಗೊಳಿಸುವುದು:**

1. ಅಪ್ರೆಂಟೈಸ್ ನಂತರ ಖಾಯಂಗೊಂಡ ಅಭ್ಯರ್ಥಿಗಳು ಕ್ರಮಸಂಖ್ಯೆ (1) ಮತ್ತು (4) ರಲ್ಲಿನ ಸೌಲಭ್ಯವನ್ನು ಪಡೆಯಲು ಅರ್ಹರಿರುವುದಿಲ್ಲ.
2. ಕ್ರಮ ಸಂಖ್ಯೆ (4)ರ ಸೌಲಭ್ಯವನ್ನು ಪಡೆಯುವ ಅಭ್ಯರ್ಥಿಗಳು ಕ್ರಮ ಸಂಖ್ಯೆ (1) ಸೌಲಭ್ಯವನ್ನು ಪಡೆಯಲು ಅರ್ಹತೆಯನ್ನು ಹೊಂದಿರುತ್ತಾರೆ.
3. ಕ್ರಮ ಸಂಖ್ಯೆ (4)ರಲ್ಲಿನ ಸೌಲಭ್ಯವು ಆದೇಶ ಹೊರಡಿಸಿದ ದಿನಾಂಕದಿಂದ ನೇಮಕಾತಿ ಹೊಂದಿದ ಅಭ್ಯರ್ಥಿಗಳಿಗೆ ಮಾತ್ರ ಒದಗಿಸುವುದು.
4. ಸದರಿ ಯೋಜನೆಯ ಸಮರ್ಪಕ ಜಾರಿಗಾಗಿ, ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳಿಗನುಸಾರ ಕಾರ್ಮಿಕ ಆಯುಕ್ತರು ಮಾರ್ಗಸೂಚಿಗಳನ್ನು ಹೊರಡಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸುಮ. ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ.

11/6

**ಇವರಿಗೆ,**

1. ಸಂಕಲನಕಾರರು, ಇ-ರಾಜ್ಯಪತ್ರ (ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸುವಂತೆ ಕೋರಿ).
2. ಪ್ರಧಾನ ಮಹಾಲೇಖಪಾಲರು (ಎ &ಇ), ಕರ್ನಾಟಕ ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂ:5398, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
6. ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ, ಕಾರ್ಮಿಕ ಭವನ, ಬೆಂಗಳೂರು
7. ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ (ಆಶಾದೀಪ ಯೋಜನೆ) ಸೊಸೈಟಿ (ರಿ), ಕಲ್ಯಾಣ ಸುರಕ್ಷಾ ಭವನ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ.3 &9), ವಿಧಾನ ಸೌಧ, ಬೆಂಗಳೂರು.

**ಪ್ರತಿ:**

1. ಮಾನ್ಯ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು.
4. ಹೆಚ್ಚುವರಿ ಪ್ರತಿ/ಶಾಖಾ ರಕ್ಷಾ ಕಡತ

# ಕರ್ನಾಟಕ ಸರ್ಕಾರ

## ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ(ಆಶಾದೀಪ ಯೋಜನೆ) ಸೊಸೈಟಿ,

3ನೇ ಮಹಡಿ, ಕಲ್ಯಾಣ ಸುರಕ್ಷಾ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29

ದೂ: 080-29759983/8883, ಇ-ಮೇಲ್: ashadeepa29@gmail.com


# ಆಶಾದೀಪ ಯೋಜನೆ

ಕರ್ನಾಟಕ ರಾಜ್ಯ ಸರ್ಕಾರವು, ಖಾಸಗಿ ವಲಯದ ಉದ್ಯೋಗಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲು ಮಾಲೀಕರನ್ನು/ಉದ್ಯೋಗದಾತರನ್ನು ಉತ್ತೇಜಿಸುವ ದೃಷ್ಟಿಯಿಂದ ಹಾಗೂ ಈ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಖಾಸಗಿ ವಲಯದಲ್ಲಿ ಉದ್ಯೋಗಾವಕಾಶ ಪಡೆಯಲು ಅನುಕೂಲವಾಗುವಂತೆ "ಆಶಾದೀಪ" ಎಂಬ ನೂತನ ಯೋಜನೆಯನ್ನು ರೂಪಿಸಿದೆ. ಈ ಯೋಜನೆಯನ್ನು ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ (ಆಶಾದೀಪ ಯೋಜನೆ) ಸೊಸೈಟಿಯ ಮೂಲಕ ಜಾರಿಗೊಳಿಸಲಾಗುತ್ತಿದೆ.

## ಯೋಜನೆಯ ಪ್ರಮುಖ ಉದ್ದೇಶಗಳು:

1. ಖಾಸಗಿ ವಲಯದ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಉದ್ಯೋಗ ದೊರಕಿಸಿಕೊಡುವುದು.
2. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಸಾಮಾಜಿಕ ಹಾಗೂ ಆರ್ಥಿಕ ಜೀವನಮಟ್ಟವನ್ನು ಸುಧಾರಿಸುವುದು.
3. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳುವುದನ್ನು ಉತ್ತೇಜಿಸಲು, ಮಾಲೀಕರಿಗೆ ಆರ್ಥಿಕ ನೆರವು ನೀಡುವುದು.

## ಯೋಜನೆಯ ಸೌಲಭ್ಯಗಳು:

1. **ಮಾಲೀಕರು ಪಾವತಿಸಿದ ಇ.ಎಸ್.ಐ. ಮತ್ತು ಇ.ಪಿ.ಎಫ್. ವಂತಿಕೆ ಮರುಪಾವತಿ:-** ಖಾಸಗಿ ವಲಯದ ಸಂಸ್ಥೆಗಳಲ್ಲಿ ಹೊಸದಾಗಿ ನೇಮಿಸಿಕೊಳ್ಳುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯೋಗಿಗಳಿಗೆ ಮಾಲೀಕರು/ಉದ್ಯೋಗದಾತರು ಕಡ್ಡಾಯವಾಗಿ ಪಾವತಿಸಿದ ಶಾಸನಬದ್ಧ ಭವಿಷ್ಯನಿಧಿ ಹಾಗೂ ಇ.ಎಸ್.ಐ. ವಂತಿಕೆಯನ್ನು ರಾಜ್ಯ ಸರ್ಕಾರದಿಂದ ಮಾಲೀಕರು/ ಉದ್ಯೋಗದಾತರಿಗೆ ಎರಡು ವರ್ಷಗಳ ಅವಧಿವರೆಗೆ ಮಾಸಿಕ ಗರಿಷ್ಠ ತಲಾ ರೂ.3000/-ಗಳ ಮಿತಿಯೊಳಗೆ ಮರುಪಾವತಿಸುವುದು.
2. **ಅಪ್ರೆಂಟಿಸ್ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳ ಶಿಷ್ಯವೇತನ (Stipend) ಮರುಪಾವತಿ:-** ಆರು ತಿಂಗಳಿನಿಂದ ಎರಡು ವರ್ಷಗಳ ಅವಧಿಯ ಅಪ್ರೆಂಟೈಸ್‌ಶಿಪ್ ತರಬೇತಿ ಪಡೆಯುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಅಪ್ರೆಂಟಿಸ್ ಕಾಯ್ದೆ, 1961 ರನ್ವಯ ಮಾಲಿಕರು ಪಾವತಿಸಿದ ಮಾಸಿಕ ಶಿಷ್ಯವೇತನ (Stipend) ಮೊತ್ತದಲ್ಲಿ 2/3 ರಷ್ಟು ಮೊತ್ತವನ್ನು ಮಾಸಿಕ ತಲಾ ರೂ.5000/- ಗಳ ಮಿತಿಯೊಳಗೆ ಮರುಪಾವತಿಸುವುದು.
3. **ಹೊಸದಾಗಿ ನೇಮಿಸಿಕೊಂಡ ಅಪ್ರೆಂಟೈಸ್ ಅಭ್ಯರ್ಥಿಗಳ ವೇತನ ಮರುಪಾವತಿ:-** ಹೊಸದಾಗಿ ನೇಮಿಸಿಕೊಂಡ ಅಪ್ರೆಂಟೈಸ್ ಅಭ್ಯರ್ಥಿಗಳ ವೇತನ ಭಾಗಶಃ ಮರುಪಾವತಿ:- ಅಪ್ರೆಂಟೈಸ್ ತರಬೇತಿ ಪೂರ್ಣಗೊಂಡ ನಂತರ ಅದೇ ಮಾಲೀಕರು ಖಾಯಂ ಹುದ್ದೆಗೆ ಅದೇ ಅಭ್ಯರ್ಥಿಯನ್ನು ಹೊಸದಾಗಿ ನೇಮಕಾತಿ ಮಾಡಿಕೊಂಡಲ್ಲಿ, ಮಾಲೀಕರು ಪಾವತಿಸಿದ ವೇತನದಲ್ಲಿ ಶೇ.50 ರಷ್ಟು ಮೊತ್ತವನ್ನು ಮಾಸಿಕ ತಲಾ ರೂ. 7000/-ಗಳ ಮಿತಿಯೊಳಗೆ ಎರಡು ವರ್ಷಗಳ ಅವಧಿಗೆ ಮರುಪಾವತಿಸುವುದು.
4. **ಹೊಸದಾಗಿ ಖಾಯಂ ಹುದ್ದೆಗೆ ನೇಮಕಾತಿಗೊಂಡ ಅಭ್ಯರ್ಥಿಗಳ ವೇತನ ಮರುಪಾವತಿ:-** ಹೊಸದಾಗಿ ಖಾಯಂ ಹುದ್ದೆಗೆ ನೇಮಿಸಿಕೊಂಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮಾಲೀಕರು ಪಾವತಿಸಿದ ವೇತನದಲ್ಲಿ ಮಾಸಿಕ ತಲಾ ರೂ. 6000/-ಗಳ ಮಿತಿಯೊಳಗೆ ಎರಡು ವರ್ಷಗಳ ಅವಧಿಗೆ ಮರುಪಾವತಿಸುವುದು

## ಸೌಲಭ್ಯಕ್ಕನುಗುಣವಾಗಿ ಅವಶ್ಯಕವಿರುವ ದಾಖಲೆಗಳು:

1. ಸಂಸ್ಥೆ ಮತ್ತು ಅಭ್ಯರ್ಥಿಗಳಿಂದ ನಿಗದಿತ ಅರ್ಜಿ ನಮೂನೆ
2. ಅಭ್ಯರ್ಥಿಯ ಗುರುತಿನ ಚೀಟಿ
3. ಜಾತಿ ಪ್ರಮಾಣ ಪತ್ರ ಸೌಲಭ್ಯ
4. ಸಂಸ್ಥೆಯ ನೋಂದಣಿ ಕುರಿತ ಪ್ರಮಾಣ ಪತ್ರ.

(1 ರಿಂದ 4ಕ್ಕೆ ಕಡ್ಡಾಯ ದಾಖಲೆಗಳು)

5. ಇ-ಪೆಹಚಾನ್ ಕಾರ್ಡ್(e-PEHCHAN Card) ಮತ್ತು ಇ.ಪಿ.ಎಫ್ ನೋಂದಣಿ ಕಾರ್ಡ್ (EPF Joining card ) (ಸೌಲಭ್ಯ-1, 3 & 4)
6. ಇ.ಪಿ.ಎಫ್ ಚಲನ್ (EPF Challan Soft Copy) ಮತ್ತು ಇ.ಎಸ್.ಐ ಚಲನ್ (ESI Challan Soft Copy) (ಸೌಲಭ್ಯ-1 & 4)
7. ಶಿಷ್ಯವೇತನ ಪಾವತಿ ಚೀಟಿ (Pay Slip) ಅಥವಾ ಯು.ಟಿ.ಆರ್ ಮಾಹಿತಿ (UTR Details) (ಸೌಲಭ್ಯ-2)
8. ವೇತನ ಪಾವತಿ ಚೀಟಿ (Pay Slip) ಅಥವಾ ಯು.ಟಿ.ಆರ್ ಮಾಹಿತಿ (UTR Details) (ಸೌಲಭ್ಯ-3)
9. ಒಪ್ಪಂದದ ಪ್ರಮಾಣ ಪತ್ರ (Contract Generation form)(ಸೌಲಭ್ಯ-2&3)
10. ಅಭ್ಯರ್ಥಿಯ ನೇಮಕಾತಿ ಪ್ರಮಾಣ ಪತ್ರ (ಸೌಲಭ್ಯ-3&4)


ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ (ಆಶಾದೀಪ ಯೋಜನೆ) ಸೊಸೈಟಿ,
ಕಲ್ಯಾಣ ಸುರಕ್ಷಾ ಭವನ, 3ನೇ ಮಹಡಿ, ಐ.ಟಿ.ಐ. ಕಂಪೌಂಡ್, ಡೈರಿ ವೃತ್ತ, ಬನ್ನೇರುಘಟ್ಟ ರಸ್ತೆ ಬೆಂಗಳೂರು-560029. ದೂ: 080-29759983/8883,
Mail ID: ashadeepa29@gmail.com, Twitter ID:@ashadeepayojane
ಹಾಗೂ ರಾಜ್ಯದ ಎಲ್ಲ ಜಿಲ್ಲೆ ಹಾಗೂ ತಾಲೂಕು ಕೇಂದ್ರಗಳಲ್ಲಿರುವ ಕಾರ್ಮಿಕ ಇಲಾಖೆಯ ಕಛೇರಿಗಳು


ಕಾರ್ಮಿಕ ಸಹಾಯವಾಣಿ
#155214 (24x7) ಸೇವೆ.

Government of Karnataka

Karnataka State Workers Welfare and Social Security (Ashadeepa Yojane) Society

3rd Floor, Kalyana Suraksha Bhavan, Bannerghatta Road,Bangalore-29.
Contact No.: 080-29759983/8883, e-mail id: ashadeepa29@gmail.com

# ASHADEEPA SCHEME

To encourage employment opportunities in the private sector factories and establishments, to the candidates belonging to Schedule Caste and Schedule Tribes, the Government of Karnataka has framed a scheme called "ASHADEEPA SCHEME". The said scheme is being implemented through "Karnataka State Workers Welfare and Social Security (Ashadeepa Scheme) Society (R)".

## Objectives of the Scheme:-

1) To create employment opportunities in private sectors to the candidates belonging to SC and ST categories.
2) To improve the socio – economic condition of SCs and STs.
3) To encourage the employment of SCs and STs, in private sectors and providing financial assistance to the employer.

## Benefits under the Scheme:-

**1. Reimbursement of ESI and EPF contribution paid by the employers:-**
The private sector employer, who newly employs SC and ST candidates, will be reimbursed the employers contribution of ESI and EPF paid by them for a period of 2 years, subject to maximum limit of Rs.3000/- p.m. per candidates.ate.

**2. Reimbursement of Stipend paid to the apprenticeship trainees:-**
The stipend amount under Apprenticeship Act, 1961 paid to the Apprenticeship Trainees belonging to SC and ST categories, who are undergoing training for a period of six months to two years, will be reimbursed for a maximum limit of Rs.5000/- p.m. per candidate and subject to 2/3rd of the total amount paid by them.

**3) Reimbursement of salary for appointment after completion of Apprentice Training:-**
If the employer recruits the same candidate after completion of apprenticeship training for a permanent posts, 50% of the salary subject to a maximum limit of Rs. 7,000/-p.m. per candidate will be reimbursed for a period of Two year.

**4. Reimbursement of salary for Newly recruited Candidates**
Reimbursement of salary paid by the employers to SC / ST candidates recruited afresh to permanent post within the limit of Rs. 6000/- p.m. for period of two years.

## Documents required as per Benefits:

1. Application form of Establishment and candidates
2. Candidates ID proof with photo
3. Caste Certificate
4. Establishment Registration certificate with ID proof

(Items 1–4: Mandatory Documents)

5. E-PEHCHAN Card & EPF Joining card (Benefit -1, 3 & 4)
6. EPF Challan Soft Copy & ESI Challan Soft Copy (Benefit -1 & 4)
7. Stipend Pay Slip or UTR Details (Benefit-2)
8. Salary Pay Slip or UTR Details (Benefit -3)
9. Contract Generation form (Benefit -2 & 3)
10. Candidates Appointment Order (Benefit -3 & 4)

Karnataka State Workers Welfare and Social Security (Ashadeepa Yojane) Society(R).
3rd Floor, Kalyana Suraksha Bhavan,Bannerghatta Road, Bangalore - 29.
Contact No.: 080-29759983/8883, Labour Helpline No: #155214 (24x7) service.
Mail ID: ashadeepa29@gmail.com, Twitter ID:@ashadeepayojane
All labour offices in the district and taluks